ವ್ಯದರಿಂದ ಈ ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟಂತೆ ಮುಖ್ಯ ಮಂತ್ರಿಗಳೇ ಮೇಲ್ವಿಚಾರಣೆ ವಹಿಸಿ ಕೊಳ್ಳುವುದು ಸೂಕ್ತವೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯ ಅವರು ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ಆಶಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವಗೌಡರು ಹೇಳಿದಂತೆ ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಅನೇಕ ಜಟಿಲ ಸಮಸ್ಯೆಗಳಿವೆ. ಕೆಲವು ಸಮಸ್ಯೆಗಳ ಬಗ್ಗೆ ಪರಿಹಾರವನ್ನು ಮುಖ್ಯ ಮಂತ್ರಿಗಳ ಮಟ್ಟದಲ್ಲಿಯೇ ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ವಿವಿಧ ಅಂಶದ ಕಾರ್ಯ ಕ್ರಮವನ್ನು ಜಾರಿಗೆ ತರುವ ಬಗ್ಗೆಯೂ ಸಹ ಬೆಂಗಳೂರು ನಗರದ ಮೇಲ್ವಿಚಾರಣೆಯನ್ನು ಮುಖ್ಯ ಮಂತ್ರಿಗಳೇ ವಹಿಸಿಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ. ಈ ಮೊದಲು ಶ್ರೀ ದೇವರಾಜ ಅರಸ್ ಅವರೇ ಇದರ ಮೇಲ್ವಿಚಾರಣೆ ವಹಿಸಿಕೊಂಡಿದ್ದರಿಂದ ಈಗಲೂ ಮಾನ್ಯ ಗುಂಡೂರಾವ್ ಅವರೇ ವಹಿಸಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

CALLING ATTENTION TO A MATTER OF URGENT PUBLIC IMPORTANCE

re : closure of Mangalore chemicals and Fertilizers Factory.

SRI B.A. MOHEEUDIN. I call the attention of the Chief Minister to the grave situation due to closure of Mangalore Chemicals and Fertilisers Factory due to scarcity of power supply.

SRI R. GUNDU RAO (Chief Minister).—I wish to make the following statement.

On account of severe stortage of powers as a result of poor monsoon in 1979 only about 50% of the energy consumed during the previous year could be allotted for consumption by high tension industry during the current year. The available supplies were distributed among various categories of industries on the basis of priorities and a power cut ranging from 40% to 60% was enforced on all high tension industry about 250 KVA contract demand. The Mangalore Chemicals & Fertilisers was among the high priority industries was subjected to a cut of only 45%. However, as it is a continuous process industry and could not operate at less than full capacity due to technical reasons, they has to consume considerably more than the monthly average allotted to them. Consequently, their entire energy allocation for 9 months from October, 1979 to June, 1980, was exhausted in the first fortnight of February, 1980, and they shut down operations.

On the basis of an average production of 28,000 tons of urea per month, the value of the loss of production is Rs. 434 - lakhs per month. The Company employs 806 persons in all but so for no one has been laid off. There is a standby generator of 550 KVA which is used only for maintaining immediate essential services. The monthly power consumption of M.C.F. is 21 million units corresponding to about 7 lakh units of power per day.

SRI B.A.MOHEIUDIN.—This is one of the most important industries. This is the industry which supplies manure to agriculture. May I know what is the quantity of power required if this factory has to work to the full capacity? What steps the Government has proposed to take in the matter of supplying power to this Factory when the power is in short supply? It is a matter to be made known to this House whether the Government is proposing to indent for powers from Kerala where power is in excess of the requirement. There was a thinking that a Solar Energy Plant could be set up in Mangalore. I want to know whether the Government is intending to set up a Solar Plant.

SRI R. GUNDU RAO.—I have stated what the actual position of the power shortage is. So far as the Mangalore Solar Energy Plant is concerned, the suggestion of the Hon. Member is to be considered Soon after the power supply position is improved, we will see that the factory is given more powers.

MATTER UNDER RULE 312

re: Amalgamation of Co-operative Socities

†ಶ್ರೀ ಕೆ.ಎಂ. ತಮ್ಮಯ್ಯ (ಕಡೂರು)—ಸನ್ಮಾನ್ಯ ಅಧ್ಯಕ್ಷರೇ, ಈ ಹಿಂದಿನ ಸರ್ಕಾರ ಒಳ್ಳೆಯ ಒಂದು ಸದ್ಭಾವನೆಯಿಂದ ಈ ಸಣ್ಣಪುಟ್ಟ ಸೊಸೈಟಿಗಳನ್ನು ವಿಲೀನಗೊಳಿಸಿದ್ದು ಜನರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಆದರೆ ಆ ಸಮಯದಲ್ಲಿ ಕೆಲವು ಸೊಸೈಟಿಗಳವರು ಹೈಕೋರ್ಟಿಗೆ ಹೋಗಿ ಸ್ಟೇ ಮಾಡಿಸಿದರು. ಈಗ ಅದು ಸರ್ಕಾರದ ಪರವಾಗಿ ತೀರ್ಮಾನವಾಗಿದೆ ಎಂದು ತಿಳಿದು ಬಂದಿದೆ. ಸರ್ಕಾರದವರು ಒಳ್ಳೆಯ ಭಾವನೆಯಿಂದ ಈ ಕೆಲಸ ಮಾಡಿದರು. ಏಕೆಂದರೆ, ಸಣ್ಣ ಪುಟ್ಟ ಸೊಸೈಟಿಗಳಲ್ಲಿ ಬಂಡವಾಳ ಕಡಿಮೆ ಇರುವುದರಿಂದ ಜನರಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯವನ್ನು ಒದಗಿಸುವುದಿಲ್ಲವೆಂದು, ಕೆಲವು ಸೊಸೈಟಿಗಳನ್ನು ಒಂದುಗೂಡಿಸಿದರೆ, ಅವುಗಳ ಬಂಡವಾಳ ಜಾಸ್ತಿಯಾಗುತ್ತದೆ ಮತ್ತು ಸರ್ಕಾರದ ಕಡೆಯಿಂದ ಬರತಕ್ಕಂಥ ಆಪಾರಧಾನ್ಯಗಳನ್ನು ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಜನರಿಗೆ ಹಂಚಲು ಅನುಕೂಲವಾಗುತ್ತದೆಂಬ ಭಾವನೆಯಿಂದ ಈ ಕೆಲಸ ಮಾಡಿದರು. ಆದರೆ ಸೊಸೈಟಿಗಳನ್ನು ಒಂದುಗೂಡಿಸುವಾಗ ಯಾವ ಯಾವ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದವು, ಯಾವ ಯಾವ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿರಲಿಲ್ಲ ಎಂಬುದನ್ನೆಲ್ಲಾ ನೋಡದೆ ಒಂದುಗೂಡಿಸಿದರು. ಇದರಿಂದ ಸರ್ಕಾರದ ಒಂದು ಉದ್ದೇಶವೇ ಸಾರ್ಥಕವಾಗಲಿಲ್ಲ. ಏಕೆಂದರೆ ಕೆಲವು ಸೊಸೈಟಿಗಳು ಹತ್ತು ಹದಿನೈದು ವರ್ಷಗಳಿಂದ ಕೆಲಸ ಮಾಡದೆ. ಕೊಟ್ಟ ಹಣವನ್ನು ಜನರಿಂದ ವಸೂಲಿ ಮಾಡದೆ. ಹಣವನ್ನು ದುರುಪಯೋಗಪಡಿಸಿಕೊಂಡಂತಹ ಅಧಿಕಾರ ವರ್ಗದವರು ಇರತಕ್ಕಂಥ ಸೊಸೈಟಿಗಳ ಜೊತೆಯಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದ ಮತ್ತು ಲಾಭಾಂಶವನ್ನು ಗಳಿಸಿದ್ದ ಸೊಸೈಟಿಗಳ ಜೊತೆಯಲ್ಲಿ ಸೇರಿಸಿದ್ದು ತಪ್ಪಾಯಿತು. ಜೊತೆಗೆ ಜನರಿಗೆ ಹತ್ತಿರವಿರುವಂತಹ ಸೊಸೈಟಿಗಳನ್ನು ತೆಗೆದುಕೊಂಡು ಹೋಗಿ ೧೦-೧೫ ಕಿಲೋಮೀಟರ್ ದೂರದಲ್ಲಿರತಕ್ಕಂಥ ಸೊಸೈಟಿಗೆ ಸೇರಿಸಿದ್ದಾರೆ ಇದರಿಂದ ಜನರು ೧೦-೧೫ ಕಿಲೋಮೀಟರ್ ದೂರದಿಂದ ಸಾಮಾನುಗಳನ್ನು ತರಬೇಕಾದಂಥ ಪರಿಸ್ಥಿತಿ ಬಂದಿದೆ. ಕೆಲವು ಸಲ ಸೊಸೈಟಿಗಳಿಗೆ ಸಕ್ಕರೆ ಬಂದರೆ ಅದು ಹಳ್ಳಿಗಳಿಗೆ ತಲುಪುವುದೇ ಇಲ್ಲ. ಸೊಸೈಟಿಯು ಹತ್ತಿರದಲ್ಲಿರುವ ಹೋಟೆಲ್‌ಗಳಿಗೇ ವಿಲೇವಾರಿ ಮಾಡಿಬಿಡುತ್ತಾರೆ. ಇದು ಸಾಮಾನ್ಯವಾಗಿ ನಡೆಯುತ್ತಿರುವ ಸಂಗತಿ, ಇನ್ನು ಜನರಿಗೆ ಅನುಕೂಲ ಮಾಡಿದ್ದಾದರೂ ಏನು? ಎರಡು-ಮೂರು ಪಂಚಾಯಿತಿಗಳಿಗೆ ಸೇರಿದಂತೆ ಸೊಸೈಟಿಗಳನ್ನು ವಿಲೀನಗೊಳಿಸಿದ್ದಾರೆ. ಒಂದೊಂದು ಪಂಚಾಯಿತಿಗೂ ಕೂಡ ೫-೬ ಹಳ್ಳಿಗಳು ಸೇರಿವೆ. ಜೊತೆಗೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ ಅನುಕೂಲಗಳು ಸಿಗುತ್ತಿಲ್ಲ